ಅಸಲು ದಾವಾ ನಂ. 229/2022
ಪಿ ಡಬ್ಲ್ಯು-1

ದಿನಾಂಕಃ 28-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ . ಐ ವಿ ಪಿ ವಕೀಲರಿಂದ.</u>**

ನಾನು ಈಗ ಲಕ್ಕಿಕೊಪ್ಪ ಗ್ರಾಮದಲ್ಲಿ ವಾಸ ಇರುತ್ತೇನೆ. ನಾನು ಈಗ ನನ್ನ ತವರು ಮನೆ ಲಕ್ಕಿಕೊಪ್ಪ ಗ್ರಾಮದಲ್ಲಿ ವಾಸವಿರುತ್ತೇನೆ ಎಂದರೆ ಸರಿ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ದಿನಾಂಕ 08-11-2002 ರಂದು ಜನಿಸಿರುತ್ತೇನೆ. ನನ್ನ ತಂದೆಯ ಹೆಸರು ನಿಂಗಪ್ಪ, ತಾಯಿಯ ಹೆಸರು ಕಮಲವ್ವ ಇರುತ್ತದೆ. ಕಮಲವ್ವಳ ತವರು ಮನೆ ಹುರುಳಿಕುಪ್ಪಿ ಇರುತ್ತದೆ. ನನ್ನ ಅಜ್ಜಿಯ ಹೆಸರು ತಾಯಿಯ ತಾಯಿ ಹೆಸರು ಶಿವಕ್ಕ ಇರುತ್ತದೆ. ಶಿವಕ್ಕಳ ತಂದೆಯ ಹೆಸರು ಯಲ್ಲಪ್ಪ ಎಂದರೆ ಸರಿ. ಯಲ್ಲಪ್ಪನಿಗೆ ಒಟ್ಟು 9 ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಶಿವಕ್ಕ, ಫಕ್ಕೀರವ್ವ, ಯಲ್ಲವ್ವ, ಪ್ರೇಮಕ್ಕ, ಶಿವಪುತ್ರಪ್ಪ , ಶಂಕ್ರಪ್ಪ, ರಮೇಶ, ಗುಡ್ಡಪ್ಪ ಮತ್ತು ನೀಲವ್ವ ಎಂದರೆ ಸರಿ. ನೀಲವ್ವ ಈ ದಾವೆಯಲ್ಲಿ 1 ನೇ ಪ್ರತಿವಾದಿ ಎಂದರೆ ಸರಿ. ನೀಲವ್ವ ಮತ್ತು ಶಿವಕ್ಕ ಖಾಸಾ ಅಕ್ಕ-ತಂಗಿಯರು ಎಂದರೆ ಸರಿ. ನೀಲವ್ವಳ ಯಾವತ್ತು ಕಾರ್ಯಕ್ರಮಗಳಲ್ಲಿ ನನ್ನ ತಾಯಿ ಭಾಗವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಗ ಆನಂದ ಈತನು ಸವಿತಾ ಎಂಬುವವರನ್ನು ದಿನಾಂಕ 16-03-2015 ರಂದು ವಿವಾಹವಾಗಿದ್ದರು ಎಂದರೆ ಸರಿ. ಸಾಕ್ಷಿ ವಿವಾಹ ವಿಚ್ಛೇಧನ ಆಗಿದ್ದರಿಂದ ತಾನು ಆನಂದ ಇವರನ್ನು ಮದುವೆಯಾಗಿರುವುದಾಗಿ ನುಡಿಯುತ್ತಾರೆ. ಆನಂದ ಮತ್ತು ಸವಿತಾ ಇವರ ವಿವಾಹ ಚಲ್ಲಾಳ ಗ್ರಾಮದಲ್ಲಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಒಂದು ಪೋಟೋ ತೋರಿಸಿ ಎಡಗಡೆಯಿಂದ 6 ನೇ ವ್ಯಕ್ತಿ ನಮ್ಮ ತಾಯಿ ಎಂದು ಒಪ್ಪಿಕೊಳ್ಳುತ್ತಾರೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಪೋಟೋದಲ್ಲಿ ಕಾಣಿಸುವ ಹುಡುಗಿ ನೀನು ಇರುತ್ತೀರಿ ಎಂದರೆ ಸಾಕ್ಷಿ ಒಪ್ಪಿಕೊಳ್ಳುತ್ತಿಲ್ಲ. ಸಾಕ್ಷಿಗೆ ಇನ್ನೊಂದು ಪೋಟೋ ತೋರಿಸಿ ಎಡಗಡೆಯಿಂದ 3 ನೇ ವ್ಯಕ್ತಿ ತನ್ನ ತಾಯಿ ಎಂದು ಒಪ್ಪಿಕೊಳ್ಳುತ್ತಾರೆ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಪೋಟೋದಲ್ಲಿ ಕಾಣಿಸುವ ಬಲಬದಿಯ 1 ನೇ ವ್ಯಕ್ತಿ ನನ್ನ ತಾಯಿಯ ತಾಯಿ ಎಂದರೆ ಸರಿ. ಸದರಿ ಪೋಟೋವನ್ನು ನಿಡಿ-3 ಎಂದು ಗುರುತಿಸಲಾಯಿತು. ನನಗೆ ಆನಂದ ಮತ್ತು ಸವಿತಾ

ಇವರ ವಿವಾಹ ಆಗಿದ್ದ ಬಗ್ಗೆ ಮೊದಲಿನಿಂದಲೂ ಗೊತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ವಿವಾಹ ವಿಚ್ಛೇಧನ ಆದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಆನಂದ ಮತ್ತು ಸವಿತಾ ಇವರ ವಿವಾಹ ಆದ ಬಗ್ಗೆ ನನಗೆ 2015 ರಿಂದಲೇ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಅವರ ವಿವಾಹ ವಿಚ್ಛೇಧನ ಆಗಿರುವುದಾಗಿ ಹೇಳಿದ್ದು ಯಾವ ದಿನಾಂಕದಂದು ಆಗಿರುತ್ತದೆ ಎಂದು ಗೊತ್ತಿಲ್ಲ. ನಾನು ಆನಂದ ಇವರನ್ನು ವಿವಾಹವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. 2 ನೇ ಪ್ರತಿವಾದಿಯ ಮದುವೆ ಯಾವಾಗ ಆಗಿತ್ತು ಎಂದು ಗೊತ್ತಿಲ್ಲ. ಅವರ ವಿವಾಹ ನಿಶ್ಚಯ ಕಾಲಕ್ಕೆ ನಾನು ಹಾಜರು ಇರಲಿಲ್ಲ. ಆನಂದ ಇವರು ರಸ್ತೆ ಅಪಘಾತದಲ್ಲಿ ದಿನಾಂಕ 19-07-2022 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರ ಮನೆತನದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದರಿಂದ ಪರಿಹಾರ ಪಡೆಯುವ ಉದ್ದೇಶದಿಂದ ಮತ್ತು ಅವರ ಆಸ್ತಿಗಳಲ್ಲಿ ಹಕ್ಕು ಸಾಧಿಸುವ ಉದ್ದೇಶದಿಂದ ನಾನು ಆನಂದ ಇವರನ್ನು ಮದುವೆಯಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳ ಸರ್ವೇ ನಂಬರ ಮತ್ತು ಚಕ್ಕುಬಂದಿ ಹೇಳಲು ಬರುತ್ತದೆ. ದಾವಾ ಆಸ್ತಿ ನಂ.64 ರ ಅಳತೆ ಹೇಳಲು ಬರುವುದಿಲ್ಲ. ಸದರಿ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯನ್ನು ಮೊದಲಿಗೆ ಆನಂದ ಇವರು ಖರೀದಿ ಹಿಡಿದಿದ್ದು ಸರ್ಕಾರಿ ಸೌಲಭ್ಯ ಪಡೆಯುವುದರ ಸಲುವಾಗಿ ಅದನ್ನು 1 ನೇ ಪ್ರತಿವಾದಿಯ ಹೆಸರಿಗೆ ಹಚ್ಚಿರುತ್ತಾರೆ. ಹಾಗೇ ಯಾವ ಕಾಗದ ಪತ್ರದ ಮೂಲಕ 1 ನೇ ಪ್ರತಿವಾದಿಯ ಹೆಸರಿಗೆ ಹಚ್ಚಿರುತ್ತಾರೆ ಎಂದು ಗೊತ್ತಿಲ್ಲ. ಹಾಗೇ ಸದರಿ ಆಸ್ತಿಯನ್ನು ಆನಂದ ಇವರು ಖರೀದಿ ಹಿಡಿದಿರುವುದಾಗಿ ಮತ್ತು ಅದನ್ನು 1 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಯೇ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಹಾಗೂ ತವರು ಮನೆಯಿಂದ ಬಂದ ಆಸ್ತಿ ಎಂದರೆ ಸರಿಯಲ್ಲ.

ಅಸಲು ದಾವಾ ನಂ. 229/2022
ಪಿ ಡಬ್ಲ್ಯು-1

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು , ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).